**1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 21-02-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರವರಿಂದಃ

ನನಗೆ 4 ಎಕರೆ ಜಮೀನು ಇದೆ. ಮತ್ತು ಬೇರೆಯವರು ಜಮೀನನ್ನು ಪಾಲುದಾರಿಕೆಯಲ್ಲಿ ಮಾಡುತ್ತೇನೆ. ಸದರಿ ಜಮೀನುಗಳು ಸರ್ವೆನಂಬರ್ 171/4 ರಲ್ಲಿ 27 ಗುಂಟೆ ನನ್ನ ಹೆಸರಿನಲ್ಲಿದೆ ಅಂದರೆ ತಮ್ಮೆಗೌಡ ಬಿನ್ ಶ್ರೀಕಂಠಯ್ಯ . ಸರ್ವೆನಂಬರ್ 143/1 ರಲ್ಲಿ 1 ಎಕರೆ 26 ಗುಂಟೆ ನಮ್ಮ ಅಜ್ಜಿ ಲಿಂಗಮ್ಮರವರ ಹೆಸರಿನಲ್ಲಿದೆ. ಸರ್ವೆನಂಬರ್ 92/5 ರಲ್ಲಿ 23 ಗುಂಟೆ ನಮ್ಮ ಅಜ್ಜಿ ಲಿಂಗಮ್ಮರವರ ಹೆಸರಿನಲ್ಲಿದೆ. ಸರ್ವೆನಂಬರ್ 92/4 ಎ ರಲ್ಲಿ 26 ಗುಂಟೆ ನನ್ನ ತಾತ ತಮ್ಮೆಗೌಡನ ಹೆಸರಿನಲ್ಲಿದೆ. ನಮ್ಮ ಅಜ್ಜಿ ತಾತನಿಗೆ 5 ಜನ ಮಕ್ಕಳಿದ್ದು ವಿಭಾಗ ವಾಗಿರುವುದಿಲ್ಲ. ಸದರಿ ಜಮೀನುಗಳಲ್ಲಿ ನನ್ನ ತಂದೆಯ ಒಡ ಹುಟ್ಟಿದವರಿಗೂ ಭಾಗವಿದೆ ಎಂದರೆ ಸರಿ . ಸರ್ವೆನಂಬರ್ 171/4 ರಲ್ಲಿ 41 ರಿಂದ 42 ಸಾವಿರ ಸಾಲ ಇದೆ . ಉಳಿದ ಜಮೀನುಗಳಲ್ಲಿ ಸಾಲ ಇರುವುದಿಲ್ಲ. ನನಗೆ ಉಳಿದ ಜಮೀನುಗಳಲ್ಲಿ ಯಾರ ಹೆಸರಿನಲ್ಲಿ ಎಷ್ಟು ಸಾಲ ಇದೆ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ ಎಂದರೆ ಸರಿ. ಸದರಿ ಜಮೀನುಗಳು ಕಂದಾಯ ಯಾರು ಪಾವತಿಸುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ , ಸಾಕ್ಷಿ ಮುಂದುವರೆದು ಸರ್ವೆನಂಬರ್ 171/4 ರಲ್ಲಿ ನಾನು ಕಂದಾಯ ಪಾವತಿಸುತ್ತಿದ್ದೇನೆ ಎನ್ನುತ್ತಾರೆ. ಬೇರೆಯವರ ಜಮೀನನ್ನು ಪಾಲುದಾರಿಕೆ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲಾತಿ ಇಲ್ಲ. ನಾನು ನನ್ನ ಜಮೀನಾದ 27 ಗುಂಟೆಯಲ್ಲಿ ಭತ್ತ ಮತ್ತು ರಾಗಿ ಬೆಳೆಯುತ್ತೇನೆ. ಪ್ರಸ್ತುತ ಯಾವ ಬೆಳೆ ಬೆಳೆದಿದ್ದೇನೆ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ. ನಾನು ನನ್ನ ಜಮೀನು ಮತ್ತು ಇತರ ಪಾಲುದಾರಿಕೆ ಜಮೀನಿನಿಂದ ಆದಾಯ ಬರುತ್ತಿದೆ ಎಂದು ತೋರಿಸಲು

ಆದಾಯವನ್ನು ಖಾತೆಗೆ ಹಾಕುವುದಿಲ್ಲ ಎನ್ನುತ್ತಾರೆ. ನಾನು ನನ್ನ ಜಮೀನು , ನನ್ನಕುಟುಂಬದ ಜಮೀನು ಬೇರೆಯವರಿಂದ ಪಾಲುದಾರಿಕೆ ಜಮೀನು ಮಾಡುತ್ತಿರುವುದಾಗಿ ಸುಳ್ಳು ನುಡಿಯುತ್ತಿದ್ದು ನನಗೆ ಯಾವುದೇ ಉದ್ಯೋಗವಿಲ್ಲದೇ ನಿರುದ್ಯೋಗಿಯಾಗಿರುತ್ತೆನೆ ಎಂದರೆ ಸರಿಯಲ್ಲ. ನನಗೆ ದುಡಿಯುವ ಸಾಮರ್ಥ್ಯ ವಿಲ್ಲದ ಕಾರಣ ನಾನು ಬೇರೆಯವರಿಗೆ ಸಾಲ ನೀಡುವ ಸಾಮರ್ಥ್ಯ ಹೊಂದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾನು ದಲ್ಲಾಳಿ ಮತ್ತು ಕಮೀಷನ್ ವ್ಯವಹಾರ ಮಾಡುತ್ತೇನೆ ಎನ್ನುತ್ತಾರೆ. ನಾನು ಯಾವುದೇ ವ್ಯವಹಾರ ಮಾಡುತ್ತಿಲ್ಲದ ಕಾರಣ ನನಗೆ ಯಾವುದೇ ಮೂಲದಿಂದ ಆದಾಯ ಇಲ್ಲದೇಇದ್ದರೂ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಶಿವಕುಮಾರ ಎಂಬುವವರು ಸುಮಾರು 5-6 ವರ್ಷಗಳಿಂದ ಪರಿಚಯ . ಸದರಿಯವರು ನಮ್ಮ ಊರಿಗೆ ಬರುವ ಪೂರ್ವದಲ್ಲಿ ಎಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿಯವರು ಸಾಯಿ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ಶಿವಕುಮಾರ ಮತ್ತು ಆತನ ಹೆಂಡತಿ ಇಬ್ಬರು ಸಾಯಿ ಎಕ್ಸಪರ್ಟೋ ನಲ್ಲಿ ಕೆಲಸ ಮಾಡುತ್ತಿದ್ದರು ಸದರಿಯವರಿಬ್ಬರಿಗೂ ಒಳ್ಳೆಯ ಸಂಬಳ ಇತ್ತು ಎಂದರೆ ದುಡಿಯುತ್ತಿದ್ದರು ಎಂದು ಗೊತ್ತು ಆದರೆ ಸಂಬಳ ಗೊತ್ತಿಲ್ಲ ಎನ್ನುತ್ತಾರೆ. ಸದರಿಯವರಿಗೆ ಶಿವಕುಮಾರರವರಿಗೆ ಇಬ್ಬರು ಮಕ್ಕಳಿದ್ದು ಮೊದಲನೆಯವರು ಮತ್ತು ಎರಡನೆಯವರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಇಬ್ಬರ ಮಕ್ಕಳ ವಿದ್ಯಾಭ್ಯಾಸ ಮತ್ತು ಎಲ್ಲಿ ವಿದ್ಯಾಬ್ಯಾಸ ಮಾಡುತ್ತಿದ್ದಾರೆ ಎಂದು ಗೊತ್ತೆ ಎಂದು ಪ್ರಶ್ನಿಸಿದರೆ ಸಾಕ್ಷಿಯು ಅವರಲ್ಲಿ ಒಬ್ಬ ಮಗಳ ಬಗ್ಗೆ ಮಾತ್ರ ಗೊತ್ತು ಎನ್ನುತ್ತಾರೆ. ಮತ್ತೊಬ್ಬ ಮಗ ಏನು ಮಾಡುತ್ತಿದ್ದಾನೆ ಎಂದು ಗೊತ್ತಿಲ್ಲ. ನನಗೆ ಶಿವಕುಮಾರ ಪರಿಚಯ ಆದಾಗ ಅವರ ಮಗಳಾದ

ಆರೋಪಿಯು ಬಿ ಇ ಮಾಡುತ್ತಿದ್ದರು. ಸದರಿ ವೇಳೆಯಲ್ಲಿ ಆರೋಪಿಯು ಯಾವ ವರ್ಷದ ಬಿ ಇ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ . ಸದರಿ ವಿಚಾರವಾಗಿ ತಿಳಿದುಕೊಳ್ಳಲು ಆರೋಪಿಪಯನ್ನಾಗಲೀ ಅವರ ತಂದೆಯನ್ನಾಗಲೀ ಕೇಳಲು ಪ್ರಯತ್ನಿಸಿಲ್ಲ. ಆರೋಪಿಯು ಯಾವ ವರ್ಷದಲ್ಲಿ ಬಿ ಇ ಮುಗಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಶಿವಕುಮಾರರವರು ಯಾವಾಗ ಮತ್ತು ಎಲ್ಲಿ ಮರಣ ಹೊಂದಿದ್ದರು ಎಂದು ನನಗೆ ನೆನಪಿಲ್ಲ. ಶಿವಕುಮಾರವರು ಗೆಜ್ಜಲಗೆರೆಯಲ್ಲಿ ನೆಲೆಸಿದ್ದು ಸದರಿಯವರು ಮರಣ ಹೊಂದಿದ ಮಾಹಿತಿ ನನಗೆ ಇಲ್ಲ. ಮುಂದುವರೆದು ಆರೋಪಿಯವರು ಒಂದು ವರ್ಷದ ಹಿಂದೆ ಊರನ್ನು ಬಿಟ್ಟು ತಮ್ಮ ಊರಿಗೆ ಸೇರಿರುತ್ತಾರೆ. ಆರೋಪಿಯು ತಮ್ಮ ವಿದ್ಯಾಭ್ಯಾಸದ ಅವಧಿಯಲ್ಲಿ ಮೈಸೂರಿನ ಹಾಸ್ಟೆಲನಲ್ಲಿ ನೆಲಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಎಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು ಸದರಿಯವರು ಹೇಗೆ ಬಿ ಇ ಸೀಟು ದೊರೆಯಿತು ಎಂದು ಮತ್ತು ವಿದ್ಯಾಭ್ಯಾಸದ ಅವಧಿಯಲ್ಲಿ ಎಲ್ಲಿ ತಂಗಿದ್ದರು ಎಂದು ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ. ಆರೋಪಿಯು ಮೈಸೂರಿನಲ್ಲಿ ಬಹುರಾಷ್ಟ್ರೀಯ ಕಂಪನಿಯಲ್ಲಿ ಕೆಲಸ ಮಾಡುತ್ತಾ ಹೋಮ್ ಸ್ಟೇ ನಲ್ಲಿ ನೆಲೆಸಿದ್ದಾರೆ ಎಂದರೆ ಸಾಕ್ಷಿಯು ಕೆಲಸ ಮಾಡುತ್ತಾರೆ ಎನ್ನುತ್ತಾರೆ.

ದಿನಾಂಕ 10-04-2023 ರಂದು ಆರೋಪಿಯು ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿಯು ಮುಂದುವರೆದು ಕೆಲಸ ಮಾಡುತ್ತಿದ್ದಾರೆ ಎಂದು ಮಾತ್ರ ಗೊತ್ತು . ದಿನಾಂಕ 10-04-2023 ರ ಪೂರ್ವದಲ್ಲಿ ಯಾವ ದಿನಾಂಕದಂದು ಆರೋಪಿಯು ಯಾವ ದಿನಾಂಕದಂದು ಬೇಟಿ ಯಾಗಿದ್ದರು ಎಂದರೆ ಸಾಕ್ಷಿ ಪ್ರತಿದಿನ ನಮ್ಮ ಬಳಿ ಬರುತ್ತಿದ್ದರು ಎನ್ನುತ್ತಾರೆ. ದಿನಾಂಕ 10-04-2023 ರಿಂದ 18-07-2023 ರ ವರೆಗಿನ

ಅವದಿಯಲ್ಲಿ ಯಾವ ಯಾವ ದಿನಾಂಕದಂದು ಆರೋಪಿಯನ್ನು ಬೇಟಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಎಲ್ಲಾ ದಿನವೂ ಬೇಟಿಯಾಗಿದ್ದು ನಿಖರ ದಿನಾಂಕ ಗೊತ್ತಿಲ್ಲ ಎನ್ನುತ್ತಾರೆ.

ದಿನಾಂಕ 18-08-2023 ರಿಂದ 28-08-2023ರ ವರೆಗಿನ ಅವದಿಯಲ್ಲಿ ನಾನು ಆರೋಪಿಯ ಮನೆ ಬಳಿ ಹೋಗಿದ್ದಾಗ ಸದರಿಯವರು ಕೆಲಸಕ್ಕೆ ಹೋಗಿರುವುದಾಗಿ ಹೇಳಿ ನನಗೆ ಸಿಕ್ಕಿರುವುದಿಲ್ಲ. ಸದರಿಯವರನ್ನು ಗೆಜ್ಜಲಗೆರೆ ಮನೆಯಲ್ಲಿ ಬೇಟಿ ಮಾಡಿ ಕೇಳಿರುತ್ತೇನೆ. ಸದರಿಯವರನ್ನು ಬೇಟಿ ಮಾಡಲು ಹೋಗಿದ್ದಾಗ ಆರೋಪಿ ಒಬ್ಬರೇ ಇರುತ್ತಿದ್ದರು. ಆರೋಪಿಯವರು ಎಷ್ಟು ಗಂಟೆಗೆ ವಿದ್ಯಾಬ್ಯಾಸಕ್ಕೆ ಹೋಗುತ್ತಿದ್ದರು ಮತ್ತು ಬರುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಆದರೆ ಬೆಳಗ್ಗೆ ಅಥವಾ ಸಂಜೆ ವೇಳೆಯಲ್ಲಿ ನನ್ನನ್ನು ಬೇಟಿ ಮಾಡುತ್ತಿದ್ದರು ಎನ್ನುತ್ತಾರೆ. ನೋಟೀಸನ್ನು ಮುದಗಂದೂರು ವಿಳಾಸಕ್ಕೆ ನೀಡಿದ್ದೇನೆ . ಸದರಿ ನೋಟೀಸನ್ನು ಆರೋಪಿಯು ಸ್ವೀಕರಿಸಿಲ್ಲ ಎಂದು ವಾಪಸ್ಸಾಗಿದೆ . ಗೆಜ್ಜಲಗರೆ ವಿಳಾಸಕ್ಕೆ ನೋಟೀಸ ನೀಡಿಲ್ಲ. ಆರೋಪಿಗೆ ಮೋಸ ಮಾಡಬೇಕೆಂದು ತಪ್ಪು ವಿಳಾಸ ನೀಡಿ ನೋಟೀಸ ನೀಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು